All India Radio: Bangalore
National Bulletin In Kannada
06.11.2025  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಮೊದಲ ಹಂತದ ಬಿಹಾರ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಆರಂಭ ; ಮುಕ್ತ-ನ್ಯಾಯಸಮ್ಮತ ಮತದಾನಕ್ಕಾಗಿ ಸಕಲ ವ್ಯವಸ್ಥೆ
- ನವದೆಹಲಿಯಲ್ಲಿ ನಾಳೆ ವಂದೇ ಮಾತರಂ ೧೫೦ನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಪ್ರಧಾನಿ ಚಾಲನೆ
- ಕೊಚ್ಚಿಯಲ್ಲಿಂದು ಭಾರತೀಯ ನೌಕಾಪಡೆಗೆ ಇಕ್ಷಾಕ್ ಹಡಗು ಸೇರ್ಪಡೆ ಸಮಾರಂಭ
- ಫಿಡೆ ವಿಶ್ವಕಪ್ ಚೆಸ್ ಪಂದ್ಯಾವಳಿ ; ಭಾರತದ ಮೂರು ಗ್ರಾಂಡ್ ಮಾಸ್ಟರ್‌ಗಳು ೩ನೇ ಸುತ್ತು ಪ್ರವೇಶ

<><><><>

ಬಿಹಾರದಲ್ಲಿಂದು ಮೊದಲ ಹಂತದ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಬೆಳಿಗ್ಗೆ ೭ ಗಂಟೆಗೆ ಆರಂಭವಾಗಿದೆ. ಮತದಾರರು ತಮ್ಮ ಮತ ಚಲಾಯಿಸಲು ಸಂಜೆ ೬ ಗಂಟೆಯವರೆಗೆ ಅವಕಾಶ ಹೊಂದಿದ್ದಾರೆ. ಈ ಹಂತದಲ್ಲಿ ೧೮ ಜಿಲ್ಲೆಗಳ ೧೨೧ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. ಇವುಗಳಲ್ಲಿ ಪಾಟ್ನಾ, ವೈಶಾಲಿ, ನಳಂದ, ಭೋಜ್‌ಪುರ, ಮುಂಗೇರ್, ಸರನ್, ಸಿವಾನ್, ಬೇಗುಸರಾಯ್, ಲಖಿಸರೈ, ಗೋಪಾಲ್‌ಗಂಜ್, ಮುಜಫರ್‌ಪುರ, ದರ್ಭಂಗಾ, ಮಾಧೇಪುರ ಮತ್ತು ಸಹರ್ಸಾ ಸೇರಿವೆ. ಈ ನಡುವೆ, ಭದ್ರತಾ ಕಾರಣಗಳಿಂದಾಗಿ, ಸಿಮ್ರಿ ಭಕ್ತಿಯಾರ್‌ಪುರ, ಮಹಿಷಿ, ತಾರಾಪುರ, ಮುಂಗೇರ್, ಜಮಾಲ್‌ಪುರ ಮತ್ತು ಸೂರ್ಯಗಢ ವಿಧಾನಸಭಾ ಕ್ಷೇತ್ರದ ೫೬ ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ಒಂದು ಗಂಟೆ ಮುಂಚಿತವಾಗಿ ಅಂದರೆ ಸಂಜೆ ೫ ಗಂಟೆಗೆ ಕೊನೆಗೊಳ್ಳಲಿದೆ. ಮುಕ್ತ, ನ್ಯಾಯಯುತ ಮತ್ತು ಶಾಂತಿಯುತ ಮತದಾನವನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಚುನಾವಣಾ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ಅತ್ಯಾಧುನಿಕ ಕಮಾಂಡ್ ಮತ್ತು

ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಲಾಗಿದೆ, ಎಲ್ಲಾ ೪೫ ಸಾವಿರದ ೩೪೧ ಮತಗಟ್ಟೆಗಳಿಂದ ವೆಬ್‌ಕಾಸ್ಟಿಂಗ್ ಮಾಡಲಾಗಿದೆ. ರಾಜ್ಯ ಪೊಲೀಸರ ಜೊತೆಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ಎಲ್ಲಾ ಮತಗಟ್ಟೆಗಳಲ್ಲಿ ನಿಯೋಜಿಸಲಾಗಿದೆ. ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು, ೯೨೬ ಸಂಪೂರ್ಣ ಮಹಿಳಾ-ನಿರ್ವಹಣೆಯ ಮತಗಟ್ಟೆಗಳು ಮತ್ತು ೧೦೭ ವಿಶೇಷಚೇತನ ಸಿಬ್ಬಂದಿ ನಿರ್ವಹಿಸುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಹೆಚ್ಚುವರಿಯಾಗಿ, ಮತದಾರರಿಗೆ ಹೆಚ್ಚಿನ ಸೌಲಭ್ಯಗಳೊಂದಿಗೆ ೩೨೦ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಪಾಟ್ನಾದಲ್ಲಿರುವ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ವಿಶೇಷ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ. ಮತದಾರರು ದೂರವಾಣಿ ಸಂಖ್ಯೆ ೦೬೧೨-೨೮೨೪೦೦೧, ಫ್ಯಾಕ್ಸ್ ೦೬೧೨-೨೨೧೫೬೧೧, ಅಥವಾ ceo_bihar@eci.gov.in & ceobihar@gmail.com ಗೆ ಇಮೇಲ್ ಮಾಡಿ ದೂರುಗಳನ್ನು ದಾಖಲಿಸಬಹುದು. ಮೊಬೈಲ್ ಠೇವಣಿ ಸೌಲಭ್ಯಗಳು ಸೇರಿದಂತೆ ಹಲವು ಮತದಾರ ಕೇಂದ್ರಿತ ಉಪಕ್ರಮಗಳು ಚುನಾವಣೆಯ ಸಮಯದಲ್ಲಿ ಲಭ್ಯವಿರುತ್ತವೆ. ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ, ೧೨೨ ಮಹಿಳಾ ಅಭ್ಯರ್ಥಿಗಳು ಸೇರಿ ಒಟ್ಟು ೧ ಸಾವಿರದ ೩೧೪ ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ೩.೭೫ ಕೋಟಿಗೂ ಹೆಚ್ಚು ಮತದಾರರು ನಿರ್ಧರಿಸಲಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ನವದೆಹಲಿಯಲ್ಲಿ ರಾಷ್ಟ್ರೀಯ ಗೀತೆ 'ವಂದೇ ಮಾತರಂ'ನ ೧೫೦ನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಸಂಸ್ಕೃತಿ ಸಚಿವಾಲಯ ಈ ಸಮಾರಂಭವನ್ನು ಆಯೋಜಿಸಲಿದೆ. ಈ ಕಾರ್ಯಕ್ರಮ ನಾಳೆಯಿಂದ ಮುಂದಿನ ವರ್ಷ ನವೆಂಬರ್ ೭ ರವರೆಗೆ ವರ್ಷಪೂರ್ತಿ ರಾಷ್ಟ್ರವ್ಯಾಪಿ ಆಚರಣೆಗೆ ನಾಂದಿ ಹಾಡುತ್ತದೆ. ಭಾರತದ ಸ್ವಾತಂತ್ರ್ಯ ಚಳವಳಿಗೆ ಸ್ಫೂರ್ತಿ ನೀಡಿದ ಮತ್ತು ರಾಷ್ಟ್ರದ ಕುರಿತು ಹೆಮ್ಮೆ ಮತ್ತು ಏಕತೆಯನ್ನು ಮೂಡಿಸುತ್ತಿರುವ ಈ ಅದ್ಭುತ ಗೀತೆಯ ೧೫೦ ನೇ ವಾರ್ಷಿಕೋತ್ಸವವನ್ನು ವರ್ಷಪೂರ್ತಿ ಆಚರಿಸಲಾಗುವುದು. ಕೇಂದ್ರ ಸಚಿವ ಸಂಪುಟ ಕಳೆದ ತಿಂಗಳ ೧ ರಂದು ರಾಷ್ಟ್ರೀಯ ಗೀತೆಯ ೧೫೦ ನೇ ವಾರ್ಷಿಕೋತ್ಸವವನ್ನು ಆಚರಿಸಲು ಅನುಮೋದನೆ ನೀಡಿತ್ತು. ಉದ್ಘಾಟನಾ ಸಮಾರಂಭದ ಭಾಗವಾಗಿ ವಂದೇ ಮಾತರಂನ ೧೫೦

ವರ್ಷಗಳ ಇತಿಹಾಸದ ಕುರಿತು ಸಂಗ್ರಹಿಸಲಾದ ಪ್ರದರ್ಶನ, ಕಿರು ಸಾಕ್ಷ್ಯಚಿತ್ರದ ಪ್ರದರ್ಶನ ಮತ್ತು ಸ್ಮರಣಾರ್ಥ ಅಂಚೆಚೀಟಿ ಮತ್ತು ನಾಣ್ಯ ಬಿಡುಗಡೆಯೂ ಇರಲಿದೆ.

<><><>

ಜಾಗತಿಕ ಸಹಕಾರಿ ಸಂಸ್ಥೆಗಳ ಶ್ರೇಯಾಂಕದಲ್ಲಿ ೧ ಮತ್ತು ೨ ನೇ ಸ್ಥಾನಗಳನ್ನು ಗಳಿಸಿದ್ದಕ್ಕಾಗಿ ಭಾರತದ ಪ್ರಮುಖ ಸಹಕಾರಿ ಸಂಸ್ಥೆಗಳಾದ ಅಮುಲ್ ಮತ್ತು ಇಫ್ಕೊಗಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಭಾರತದ ಸಹಕಾರಿ ಕ್ಷೇತ್ರವು ಚೈತನ್ಯಶೀಲವಾಗಿದೆ ಮತ್ತು ಹಲವರ ಜೀವನವನ್ನು ಪರಿವರ್ತಿಸುತ್ತಿದೆ. ಮುಂದಿನ ದಿನಗಳಲ್ಲಿ ಈ ವಲಯವನ್ನು ಮತ್ತಷ್ಟು ಪ್ರೋತ್ಸಾಹಿಸಲು ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅವರು ಹೇಳಿದರು.

<><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ೧೯೭೭ ರ ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯನ್ನು ಬಳಸಿಕೊಂಡು ೧೦೦ ಕ್ಕೂ ಹೆಚ್ಚು ದೇಶಗಳಿಂದ ಆಮದುಗಳ ಮೇಲೆ ಏಕಪಕ್ಷೀಯವಾಗಿ ಸುಂಕಗಳನ್ನು ನಿಗದಿಪಡಿಸುವ ಮೂಲಕ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಮತ್ತು ಅಮೆರಿಕದಲ್ಲಿ ಹೆಚ್ಚಿನ ಉತ್ಪಾದನೆಯನ್ನು ಪ್ರಚೋದಿಸುವ ಪ್ರಯತ್ನದ ಕಾನೂನುಬದ್ಧತೆಯ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಹಲವು ವರ್ಷಗಳಲ್ಲೇ ಅತ್ಯಂತ ಮಹತ್ವದ ಆರ್ಥಿಕ ಪ್ರಕರಣಗಳಲ್ಲಿ ಒಂದೆಂದು ಪರಿಗಣಿಸಲಾದ ಈ ಪ್ರಕರಣವು ಅಧ್ಯಕ್ಷ ಟ್ರಂಪ್ ತಮ್ಮ ಅಧಿಕಾರ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸಿದ್ದಾರೆಯೇ ಅಥವಾ ತೆರಿಗೆ ವಿಧಿಸಲು ಸಂಸತ್ತಿನ ಅಧಿಕಾರವನ್ನು ಮೀರಿ ಕ್ರಮಕೈಗೊಂಡಿದ್ದಾರೆ ಎಂಬುದನ್ನು ನಿರ್ಧರಿಸಲಿದೆ. ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಮತ್ತು ನ್ಯಾಯಮೂರ್ತಿ ಆಮಿ ಕೋನಿ ಬ್ಯಾರೆಟ್ ಮತ್ತು ನೀಲ್ ಗೋರ್ಸುಚ್ ಅವರು ಸುಂಕಗಳ ಕುರಿತು ಸರ್ಕಾರ ನೀಡಿರುವ ಸಮರ್ಥನೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದರು. ಹಲವಾರು ಸಣ್ಣ ಉದ್ಯಮಗಳು ಸುಂಕಗಳನ್ನು ಕಾನೂನುಬಾಹಿರವೆಂದು ಪ್ರಶ್ನಿಸಿವೆ.

<><><>

ಕೊಚ್ಚಿಯ ನೌಕಾ ನೆಲೆಯಲ್ಲಿ ಇಂದು ಇಕ್ಷಾಕ್ ಹಡಗು ಅಧಿಕೃತವಾಗಿ ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿದೆ. ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ

ಅವರ ಸಮ್ಮುಖದಲ್ಲಿ ಸೇರ್ಪಡೆ ಸಮಾರಂಭ ನಡೆಯಲಿದೆ. ಈ ಹಡಗಿನ ಸೇರ್ಪಡೆಯೊಂದಿಗೆ ಭಾರತೀಯ ನೌಕಾಪಡೆಯ ಸಾಮರ್ಥ್ಯ ಮತ್ತಷ್ಟು ವೃದ್ಧಿಯಾಗಲಿದೆ. ಇಕ್ಷಾಕ್ ಹಡಗನ್ನು ದೇಶೀಯವಾಗಿ ನಿರ್ಮಿಸಲಾಗಿದೆ. ಇಕ್ಷಾಕ್ ಎಂದರೆ ಸಂಸ್ಕೃತದಲ್ಲಿ ಮಾರ್ಗದರ್ಶಿ ಎಂಬ ಅರ್ಥವಿದೆ. ಬಂದರುಗಳು, ಕರಾವಳಿ ಮತ್ತು ಆಳ ನೀರಿನ ಹೈಡ್ರೊಗ್ರಾಫಿಕ್ ಸಮೀಕ್ಷೆಗಳನ್ನು ಕೈಗೊಳ್ಳಲು ಈ ಹಡಗನ್ನು ವಿನ್ಯಾಸಗೊಳಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸಮುದ್ರದಲ್ಲಿ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಮತ್ತು ಕಡಲ ಸುರಕ್ಷತೆಯನ್ನು ಬಲಪಡಿಸಲು ಈ ರೀತಿಯ ದತ್ತಾಂಶದ ಅಗತ್ಯವಿರುತ್ತದೆ.

<><><><>

ಭಾರತದ ಅಗ್ರ ಚೆಸ್ ಆಟಗಾರರು ಫಿಡೆ ವಿಶ್ವಕಪ್ ೨೦೨೫ ರಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ, ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ ಗುಕೇಶ್, ಅರ್ಜುನ್ ಎರಿಗೈಸಿ ಮತ್ತು ಪೆಂಟಾಲ ಹರಿಕೃಷ್ಣ ೩ನೇ ಸುತ್ತಿಗೆ ಆಯ್ಕೆಯಾಗಿದ್ದಾರೆ. ಅಚ್ಚರಿಯಂತೆ ಭಾರತದ ದಿಪ್ತಯಾನ್ ಘೋಷ್ ಹಾಲಿ ವಿಶ್ವ ಬ್ಲಿಟ್ಜ್ ಸಹ-ಚಾಂಪಿಯನ್ ಇಯಾನ್ ನೆಪೋಮ್ನಿಯಾಚಿ ವಿರುದ್ಧ ಜಯಗಳಿಸಿದರು. ಗುಕೇಶ್ ಕಝಾಕಿಸ್ತಾನದ ಕಾಜಿಬೆಕ್ ನೊಗರ್ಬೆಕ್ ಅವರನ್ನು ೧.೫ - ೦.೫ ಅಂತರದಿಂದ ಸೋಲಿಸಿದರು, ಮತ್ತು ಎರಿಗೈಸಿ ಬಲ್ಗೇರಿಯಾದ ಮಾರ್ಟಿನ್ ಪೆಟ್ರೋವ್ ಅವರನ್ನು ೨-೦ ಅಂತರದಿಂದ ಸೋಲಿಸಿ ಮುಂದಿನ ಸುತ್ತಿನಲ್ಲಿ ತಮ್ಮ ಸ್ಥಾನವನ್ನು ಖಚಿತಪಡಿಸಿಕೊಂಡರು. ಹರಿಕೃಷ್ಣ  ಜಿಎಂ ಅರ್ಸೆನಿ ನೆಸ್ಟೆರೋವ್ ಅವರನ್ನು ಸೋಲಿಸಿ ಮುನ್ನಡೆದರು. ದಿಪ್ತಾಯನ್ ಘೋಷ್, ಇಯಾನ್ ನೆಪೋಮ್ನಿಯಾಚಿಯನ್ನು ೧.೫ - ೦.೫ ಅಂತರದಿಂದ ಸೋಲಿಸಿದರು. ಅವರ ವೃತ್ತಿಜೀವನದ ಅತಿದೊಡ್ಡ ಗೆಲುವು ಇದಾಗಿದೆ. ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನ ಮುಂದಿನ ಚಾಲೆಂಜರ್ ಅನ್ನು ನಿರ್ಧರಿಸುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲು ಆಟಗಾರರು ಗೋವಾದಲ್ಲಿ ಮುಂದುವರಿದಿರುವ ಫಿಡೆ ವಿಶ್ವಕಪ್ ೨೦೨೫ ಪಂದ್ಯಾವಳಿಯಲ್ಲಿ ಕಣಕ್ಕಿಳಿದಿದ್ದಾರೆ.

<><><><>

ನವದೆಹಲಿಯ ಲೋಕ ಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸದಲ್ಲಿ ನಿನ್ನೆ ಪ್ರಧಾನಿ ನರೇಂದ್ರ ಮೋದಿ, ಮಹಿಳಾ ವಿಶ್ವಕಪ್ ಗೆದ್ದ ಭಾರತದ ಯಶಸ್ವಿ ಮಹಿಳೆಯರ ಅಥಿತ್ಯ ವಹಿಸಿದ್ದರು. ವನಿತಾ ತಂಡದ ವಿಜಯಕ್ಕಾಗಿ ಅವರು, ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿಗಳನ್ನು ಮತ್ತೊಮ್ಮೆ ಅಭಿನಂದಿಸಿದರು. ಹಾಗೂ ಫಿಟ್ ಇಂಡಿಯಾ ಸಂದೇಶವನ್ನು ಆಟಗಾರ್ತಿಯರು ಯುವ ಜನತೆಗೆ

ವಿಶೇಷವಾಗಿ ಬಾಲಕಿಯರಿಗೆ ತಲುಪಿಸುವಂತೆ ಕೋರಿದರು. ತಾವು ಓದಿದಂತಹ ಶಾಲೆಗಳಿಗೆ ಹೋಗಿ ಅಲ್ಲಿನ ಮಕ್ಕಳಿಗೆ ತಮ್ಮ ಯಶೋಗಾಥೆಗಳ ಮೂಲಕ ಸ್ಪೂರ್ತಿ ನೀಡುವಂತೆ ಕೋರಿದರು. ಸಭೆಯ ವೇಳೆ ನಾಯಕಿ ಹರ್ಮನ್ ಪ್ರೀತ್ ಕೌರ್, ೨೦೧೭ರಲ್ಲಿ ಪ್ರಧಾನಿಯವರನ್ನು ಭೇಟಿಯಾದಾಗ ತಮ್ಮ ಬಳಿ ಟ್ರೋಫಿ ಇಲ್ಲದಿದ್ದನ್ನು ನೆನಪಿಸಿಕೊಂಡರು. ಇದೇ ವೇಳೆ ಮಾತನಾಡಿದ ಉಪನಾಯಕಿ ಸ್ಮೃತಿ ಮಂದಾನ, ಪ್ರಧಾನಿಯವರು ಈ ಹಿಂದೆಯೂ ನಮ್ಮನ್ನು ಪ್ರೋತ್ಸಾಹಿಸಿದ್ದು, ಎಂದಿಗೂ ಎಲ್ಲರಿಗೂ ಸ್ಪೂರ್ತಿದಾಯಕರಾಗಿದ್ದಾರೆ ಎಂದರು. ಇದೇ ವೇಳೆ ಅವರು ಇತ್ತೀಚಿನ ವರ್ಷಗಳಲ್ಲಿ ಬಾಲಕಿಯರು ಎಲ್ಲಾ ವಲಯಗಳಲ್ಲಿ ಉತ್ತಮ ಯಶಸ್ಸು ಸಾಧಿಸುತ್ತಿರುವ ಕುರಿತು ಸಂತಸ ವ್ಯಕ್ತಪಡಿಸಿದರು.

<><><><>

ಭಾರತ-ಆಸ್ಟ್ರೇಲಿಯಾ ನಡುವಿನ ಐದು ಪಂದ್ಯಗಳ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಯ ೪ನೇ ಪಂದ್ಯ ಆಸ್ಟ್ರೇಲಿಯಾದ ಕ್ವಿನ್ಸ್ ಲ್ಯಾಂಡ್‌ನ ಕರ್‍ರಾರ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ೧.೪೫ಕ್ಕೆ ಆರಂಭವಾಗಲಿದೆ. ಮೂರನೇ ಪಂದ್ಯದಲ್ಲಿ ಭಾರತ, ಆಸ್ಟ್ರೇಲಿಯಾವನ್ನು ೫ ವಿಕೆಟ್‌ಗಳಿಂದ ಮಣಿಸಿದ ಬಳಿಕ ಪ್ರಸ್ತುತ ಸರಣಿ ೧-೧ ಅಂತರದಲ್ಲಿ ಸಮಬಲದಲ್ಲಿದೆ. ಈ ನಡುವೆ ೪ನೇ ಪಂದ್ಯಕ್ಕೆ ಆಸ್ಟ್ರೇಲಿಯಾ ತಂಡದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದೆ. ಟ್ರಾವಿಸ್ ಹೆಡ್ ಮತ್ತು ಸೀನ್ ಅಬಟ್ ಅವರನ್ನು ಟಿ-೨೦ ತಂಡದಿಂದ ಕೈಬಿಡಲಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>